# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 112

## ನಾವು ಮಾಡುವ ಅಲ್ಪ ಧರ್ಮಾಚಾರಣೆಯನ್ನು ದೇವರು ಸ್ವೀಕರಿಸುತ್ತಾನೆಯಾ?

ಪೂಜ್ಯ ಗುರುಗಳಿಗೆ ಭಕ್ತಿಪೂರ್ವಕ ನಮಸ್ಕಾರಗಳು. ತಮ್ಮ ಭಾಗವತ ನಮ್ಮ ಜೀವನವನ್ನು ಬದಲಾಯಿಸುತ್ತಿದೆ. ತಮಗೆ ಏನು ನೀಡಿದರೂ ಕಡಿಮೆಯೇ. ಬೆಳಿಗ್ಗೆ ಸ್ನಾನ ಮುಗಿಸಿದ ತಕ್ಷಣ ನಿಮ್ಮ ಭಾಗವತ ಪ್ರವಚನ ಕೇಳುತ್ತೇವೆ. ಆಫೀಸಿಗೆ ಹೋಗಿ ಬರುವಾಗ ಹರಿಭಕ್ತಿಸಾರವನ್ನು ಕೇಳುತ್ತಿದ್ದೇನೆ. ರಾತ್ರಿ ಮಲಗುವ ಮುನ್ನ ನಮ್ಮ ಗುರುಪರಂಪರೆಯ ಚರಿತ್ರೆಯನ್ನು ಕೇಳುತ್ತಿದ್ದೇನೆ.  ರಾತ್ರಿ ಮಲಗಿದಾಗ ಸ್ವಲ್ಪವ ಎಚ್ಚರವಾದರೂ ನಿಮ್ಮ ಧ್ವನಿಯೇ ನನ್ನ ಮನಸ್ಸಿನಲ್ಲಿ ಕೇಳುತ್ತಿರುತ್ತದೆ. ನಮ್ಮಂತಹ ಪಾಮರರಿಗೆ ನೀವು ನೀಡುತ್ತಿರುವದು ಮೃಷ್ಟಾನ್ನ ಗುರುಗಳೆ.

ಅನೇಕ ದಿನಗಳಿಂದ ನನ್ನನ್ನು ಕಾಡುತ್ತಿರುವ ಪ್ರಶ್ನೆ ಇದೆ. ಪ್ರಶ್ನೆ ಬಾಲಿಶವಾಗಿದ್ದಲ್ಲಿ, ಅಥವಾ ತಪ್ಪಿದ್ದಲ್ಲಿ ದಯವಿಟ್ಟು ಕ್ಷಮಿಸಿ.

ಆಚಾರ್ಯರೇ, ನಮ್ಮ ಮನೆಯಲ್ಲಿ ನಾವು ಪೂರ್ಣವಾಗಿ ಸದಾಚಾರಿಗಳಲ್ಲ. ಹಾಗೆಂದು ನಿಷಿದ್ಧ ಕೆಲಸ ಮಾಡುತ್ತಿಲ್ಲ. ಉದಾಹರಣೆಗೆ  ನಿತ್ಯ ಪೂಜೆ ಮಾಡಬೇಕು. ಆಗುತ್ತಿಲ್ಲ. ಶುದ್ಧ ಮಡಿಯಲ್ಲಿ ಅಡಿಗೆ ಮಾಡಿ ತಿನ್ನಬೇಕು. ಅದನ್ನು ಮಾಡುತ್ತಿಲ್ಲ. ಹಾಗೆಂದು ಹೋಟೆಲ್ಲಿನಲ್ಲಿ ತಿನ್ನುತ್ತಿಲ್ಲ. ನಿಷಿದ್ಧ ಪದಾರ್ಥಗಳನ್ನೂ ತಿನ್ನುತ್ತಿಲ್ಲ. ದೇವರಲ್ಲಿ ಭಕ್ತಿಯಿದೆ. ಸಾಧನೆಯಲ್ಲಿ ನಮ್ಮಂತಹವರಿಗೆ ಸ್ಥಾನವಿದೆಯೇ ಆಚಾರ್ಯರೆ. ನಮ್ಮ ಭಕ್ತಿಯನ್ನು ದೇವರು ಸ್ವೀಕರಿಸುತ್ತಾನೆಯಾ.  ಕೆಲವು ನಿಯಮಗಳನ್ನು ಅನುಸರಿಸುತ್ತಿದ್ದೇವೆ. ಕೆಲವು ನಿಯಮಗಳನ್ನು ಪಾಲಿಸಲು ಸಾಧ್ಯವಾಗುತ್ತಿಲ್ಲ. ಮಾಡಬಾರದು ಎಂದು ಹೇಳಿರುವದನ್ನು ಖಂಡಿತ ಮಾಡುವದಿಲ್ಲ. ಆದರೆ ಮಾಡಬೇಕಾದ ಎಲ್ಲವನ್ನೂ ಪಾಲಿಸದೇ ಇದ್ದಾಗ ದೇವರು ನಾವು ಮಾಡಿದ್ದಕ್ಕೆ ಉತ್ತಮ ಫಲವನ್ನು (ಲೌಕಿಕ ಫಲವಲ್ಲ. ನೀವು ಭಾಗವತದಲ್ಲಿ ಹೇಳಿದಂತೆ ಜ್ಞಾನ ಭಕ್ತಿ ವೈರಾಗ್ಯಗಳನ್ನು ) ಕರುಣಿಸುತ್ತಾನೆಯಾ. ದಯವಿಟ್ಟು ತಿಳಿಸಿ.

— ಅರವಿಂದ್ ಭಾರದ್ವಾಜ್

## ಉತ್ತರ

ಅವಶ್ಯವಾಗಿ ಸ್ವೀಕರಿಸುತ್ತಾನೆ.

ವಿಶ್ವನಂದಿನಿಯಲ್ಲಿ ಇಷ್ಟು ದಿವಸಗಳಲ್ಲಿ ಕೇಳಲಾಗಿರುವ ಪ್ರಶ್ನೆಗಳಲ್ಲಿಯೇ ಅತ್ಯುತ್ತಮ ಪ್ರಶ್ನೆಯಿದು.  ತುಂಬ ಸಂತೋಷ.

ಈ ನಿಮ್ಮ ಪ್ರಶ್ನೆಗೆ ಶ್ರೀಮದಾಚಾರ್ಯರೇ ನೇರವಾಗಿ ಗೀತಾತಾತ್ಪರ್ಯದಲ್ಲಿ ಉತ್ತರಿಸಿದ್ದಾರೆ.

ತ್ಯಕ್ತ್ವಾಪಿ ಶಾಸ್ತ್ರವಿಹಿತಂ ಮಿಥ್ಯಾಜ್ಞಾನವಿವರ್ಜಿತಾಃ ।
ಭಕ್ತ್ಯಾ ವಿಷ್ಣುಂ ಯಜಂತೇ ಯೇ
ನಿಷಿದ್ಧಾಚರಣೋಜ್ಝಿತಾಃ ।
ತೇಽಪಿ ಯಾಂತಿ ಹರಿಂ ಶಾಸ್ತ್ರವಿಧಾನಸ್ಥಾಃ ಕುತಃ
ಪುನಃ।।

ಆಚಾರ್ಯರ ವಚನಗಳ ಅಭಿಪ್ರಾಯ ಹೀಗಿದೆ —

“ಶಾಸ್ತ್ರ ಯಾವುದನ್ನು ಮಾಡಬೇಕು ಎಂದು ಹೇಳುತ್ತದೆಯೋ, ಅದನ್ನು ಮಾಡಿಲ್ಲ. ಆದರೆ ಮಿಥ್ಯಾಜ್ಞಾನವಿಲ್ಲ. ಅಂದರೆ, ನಾನೇ ದೇವರು,

ಜಗತ್ತು ಸುಳ್ಳು, ಬ್ರಹ್ಮಾದಿಗಳೇ ಪರಬ್ರಹ್ಮ, ಇತ್ಯಾದಿ ತಪ್ಪು ತಿಳುವಳಿಕೆ ಇಲ್ಲ. ನಿಷಿದ್ಧವನ್ನು ಬಿಟ್ಟು ಎಷ್ಟು ಸಾಧ್ಯವೋ ಅಷ್ಟು ದೇವರನ್ನು ಭಜಿಸುತ್ತಾರೆ. ಅಂತಹವರಿಗೂ ಹರಿ ದೊರೆಯುತ್ತಾನೆ. ಅಂದಮೇಲೆ ಶಾಸ್ತ್ರ ಹೇಳಿದ ಎಲ್ಲ ವಿಧಾನಗಳನ್ನು ಅನುಸರಿಸುವವರಿಗೆ ದೊರೆಯವದಿಲ್ಲವೇನು?”

ನಮ್ಮ ಟೀಕಾಕೃತ್ಪಾದರು ಭಗವತ್ಪಾದರ ಅಭಿಪ್ರಾಯವನ್ನು ಸುಸ್ಪಷ್ಟವಾಗಿ ತಿಳಿಸುತ್ತಾರೆ —

ಅನೇನ ಶಾಸ್ತ್ರವಿಧ್ಯುತ್ಸರ್ಗಾದಿ ಅಪ್ರಯೋಜಕೀಕೃತ್ಯ ಶ್ರದ್ಧಾಯಾ ಏವ ಪ್ರಯೋಜಕತ್ವಕಥನಸ್ಯ ಅಭಿಪ್ರಾಯೋಽಪಿ ವರ್ಣಿತೋ ಭವತಿ.

ಇದರ ತಾತ್ಪರ್ಯ ಹೀಗಿದೆ —

ಶಾಸ್ತ್ರ ಹೇಳಿದ ವಿಧಿಯನ್ನು ಪಾಲನೆ ಮಾಡದೆ ತಮ್ಮಿಚ್ಛೆಯಂತೆ ಇದ್ದರೆ ಫಲವಿಲ್ಲ ಎಂದು ಹಿಂದೆ ಹೇಳಿದೆ. ಆದರೆ, ಶಾಸ್ತ್ರವಿಧಿಪಾಲನೆಗಿಂತ ಶ್ರದ್ಧೆ, ಅರ್ಥಾತ್ ಜೀವದ ಭಕ್ತಿಯೇ ಪ್ರಧಾನವಾದದ್ದು.

ಒಟ್ಟಾರೆ ನಿರ್ಣಯವಿಷ್ಟು —

ಶಾಸ್ತ್ರ ಹೇಳುವ ಎಲ್ಲ ಕರ್ಮಗಳನ್ನೂ ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಪಾಲನೆ ಮಾಡಲು ಸಾಧ್ಯವಿಲ್ಲ. ಎಲ್ಲವನ್ನೂ ಒಟ್ಟಿಗೇ ಬಿಡಲೂ ಸಾಧ್ಯವಿಲ್ಲ.

ಸಾಧನೆಯ ಪ್ರತೀ ಹಂತದಲ್ಲಿಯೂ  ಎಷ್ಟು ನಿಷಿದ್ಧಕರ್ಮಗಳನ್ನು ಬಿಡಲು ಸಾಧ್ಯವೋ ಅಷ್ಟನ್ನೂ ಬಿಡಲೇಬೇಕು. ಎಷ್ಟು  ವಿಹಿತಕರ್ಮಗಳನ್ನು ಮಾಡಲು ಸಾಧ್ಯವೋ ಅಷ್ಟನ್ನು ಮಾಡಲೇಕು. ಮಾಡುವ ಸಂದರ್ಭದಲ್ಲಿ ಮಾತ್ರ ಭಕ್ತಿ ಪರಿಪೂರ್ಣವಾಗಿರಬೇಕು. ನಮಗೆ ನಾವೇ ಮೋಸ ಮಾಡಿಕೊಂಡರೆ (ನಿಷಿದ್ಧವನ್ನು ಬಿಡಲು ಸಾಧ್ಯವಿದ್ದರೂ ಬಿಡದೇ ಇದ್ದರೆ, ವಿಹಿತವನ್ನು ಮಾಡಲು ಸಾಧ್ಯವಿದ್ದರೂ ಮಾಡದೇ ಇದ್ದರೆ ನಮಗೆ ನಾವು ಮಾಡಿಕೊಳ್ಳುವ ವಂಚನೆ) ಭಕ್ತಿ ಇರಲು ಸಾಧ್ಯವಿಲ್ಲ. ಭಕ್ತಿ ಇಲ್ಲದಿದ್ದಲ್ಲಿ ಶ್ರದ್ಧೆ ಇರುವದಿಲ್ಲ.

ಆತ್ಮವಂಚನೆ ಮಾಡಿಕೊಳ್ಳದೇ ಇದ್ದರೆ ಭಕ್ತಿ ಇರುತ್ತದೆ. ಭಕ್ತಿ ಇದ್ದರೆ ಶ್ರದ್ಧೆ ಇರುತ್ತದೆ. ಆ

ಶ್ರದ್ಧಾಪೂರ್ವಕವಾಗಿ ನಾವು ಮಾಡುವ ವಿಹಿತಕರ್ಮದ ಆಚರಣೆ ನಮಗೆ ಫಲವನ್ನು ನೀಡಿಯೇ ನೀಡುತ್ತದೆ.

ಅದಕ್ಕಾಗಿಯೇ ಕೃಷ್ಣದೇವರು ಹೇಳುತ್ತಾರೆ — ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೋ ಮಹತೋ ಭಯಾತ್ ಎಂದು. ಈ ರೀತಿಯಾಗಿ ಆಚರಣೆ ಮಾಡುವ ಅತೀ ಸಣ್ಣ ಧರ್ಮವೂ ನಮ್ಮನ್ನು ಮಹಾಭಯ ಎಂದು ಕರೆಸಿಕೊಳ್ಳುವ ಸಂಸಾರದ ಭಯದಿಂದಲೇ ಪಾರು ಮಾಡುತ್ತದೆ ಎಂದು.

ಹೀಗಾಗಿ ನಿಮಗೆ ಎಷ್ಟು ಪರಿಪೂರ್ಣವಾಗಿ ಸಾಧ್ಯವೋ ಅಷ್ಟು ನಿಷಿದ್ಧವನ್ನು ಬಿಟ್ಟು, ಎಷ್ಟು ಪರಿಪೂರ್ಣವಾಗಿ ಸಾಧ್ಯವೋ ಅಷ್ಟು ವಿಹಿತವಾದುದನ್ನು ಭಕ್ತಿಯಿಂದ ಮಾಡುತ್ತಿದ್ದಲ್ಲಿ ದೇವರು ನಿಮಗೆ ಜ್ಞಾನಭಕ್ತಿ ವೈರಾಗ್ಯಗಳನ್ನು ನೀಡಿಯೇ ನೀಡುತ್ತಾನೆ. ಸಂಶಯ ಬೇಡ.

— ವಿಷ್ಣುದಾಸ ನಾಗೇಂದ್ರಾಚಾರ್ಯ